ಹೊಸ ಹೊಸ ತಲೆಮಾರುಗಳ ಕಣ್ಣು ತೆರೆಸಬಲ್ಲ ಹತ್ತಾರು ದಾಖಲೆಗಳಿವೆ.

ತಮ್ಮ ಶಕ್ತಿ, ಸಾಧ್ಯತೆಗಳ ಬಗ್ಗೆ ಅಪಾರ ಆತ್ಮವಿಶ್ವಾಸವುಳ್ಳ ರಾಜಕಾರಣಿಯಾಗಿದ್ದ ಅರಸು ಪ್ರಜಾಪ್ರಭುತ್ವದ ಮುಖ್ಯ ನೆಲೆಯಾದ ಸಂವಾದದಲ್ಲಿ ನಂಬಿಕೆಯಿಟ್ಟಿದ್ದವರು. ವರುಣಾನಾಲೆ ಯೋಜನೆಯನ್ನು ವಿರೋಧಿಸಲು ಮಂಡ್ಯದ ರೈತರು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಬೃಹತ್ ಸಭೆಗೆ ತಾವಾಗಿಯೇ ಹೋದ ಅರಸು ತಮ್ಮನ್ನು ವಿರೋಧಿಸುತ್ತಿದ್ದ ಜನಸ್ತೋಮದ ಎದುರು ತಮ್ಮ ನಿಲುವನ್ನು ವಿವರಿಸಬಲ್ಲವರಾಗಿದ್ದರು. ಭೂಸುಧಾರಣೆಯನ್ನು ವಿರೋಧಿಸಿದ ಭೂಮಾಲೀಕರ ಎದುರು ನಿಂತು, ರಷ್ಯಾದಂತೆ ಹಿಂಸಾತ್ಮಕವಾಗಿ ಭೂಮಿ ಹಂಚುವ ಹಾದಿಗೆ ಇಳಿಯದೆ ಹೊಂದಾಣಿಕೆಯ ಮೂಲಕ ಭೂಮಿ ಹಂಚಬೇಕಾಗಿರುವುದನ್ನು ಮನವರಿಕೆ ಮಾಡಿಕೊಡಬಲ್ಲವರಾಗಿದ್ದರು. ದೇಶದ ದೊಡ್ಡ ಸಮಾಜವಿಜ್ಞಾನಿಗಳ ಸಭೆಯಲ್ಲಿ ಕೇಳುಗನಾಗಿ ಕೂತು ಅವರ ಚಿಂತನೆಗಳ ಟಿಪ್ಪಣಿ ಮಾಡಿಕೊಂಡು ಸಂಜೆಯ ಹೊತ್ತಿಗೆ ಅದೇ ಸಭೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಯೋಜನೆಗಳ ನೀಲಿನಕಾಶೆಯನ್ನು ಮಂಡಿಸಬಲ್ಲವರಾಗಿದ್ದರು. ಐತಿಹಾಸಿಕ ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರನ್ನು ಕಾರಿನಲ್ಲಿ ಕೂರಿಸಿಕೊಂಡು ಜಿಲ್ಲೆಯುದ್ದಕ್ಕೂ ತಾವೇ ಡ್ರೈವ್ ಮಾಡುತ್ತಾ, ಇಂದಿರಾ ಗಾಂಧಿಯವರನ್ನು ಗೆಲ್ಲಿಸಿಕೊಂಡುಬರಬಲ್ಲ ಅಸಾಧ್ಯ ಎನರ್ಜಿ ಉಳ್ಳವರಾಗಿದ್ದರು. ಲೋಹಿಯಾ ಸಂಪಾದಿಸುತ್ತಿದ್ದ 'ಮ್ಯಾನ್‌ಕೈಂಡ್' ಮಾಸಿಕದಿಂದ ಹಿಡಿದು ತಮ್ಮ ಕಾಲದ ಬಹು ಮುಖ್ಯ ಪುಸ್ತಕಗಳವರೆಗೂ ಹಬ್ಬಿದ್ದ ವಿಸ್ತಾರವಾದ ಓದು ಕೂಡ ಅವರ ಗಂಭೀರ ವ್ಯಕ್ತಿತ್ವವನ್ನು ರೂಪಿಸಿತ್ತು.

ಅರಸು ಒಡನಾಡಿಗಳ ಜೊತೆಜೊತೆಗೇ ಅರಸು ಜೊತೆಗೆ ಕೆಲಸ ಮಾಡಿದ ಜೆ.ಸಿ. ಲಿನ್, ಚಿರಂಜೀವಿಸಿಂಗ್, ಯಲ್ಲಪ್ಪರೆಡ್ಡಿ, ಲಕ್ಷ್ಮಣ್ ಥರದ ಸೂಕ್ಷ್ಮ ಅಧಿಕಾರಿಗಳು; ಮಲ್ಲಿಕಾರ್ಜುನ ಖರ್ಗೆ, ಎಂ. ರಘುಪತಿ, ಐ.ಜಿ. ಸನದಿ, ರಮೇಶ್‌ಕುಮಾರ್, ಎ.ಕೆ. ಸುಬ್ಬಯ್ಯ, ಎಚ್. ವಿಶ್ವನಾಥ್ ಥರದ ರಾಜಕಾರಣಿಗಳು; ವಿ.ಕೆ. ನಟರಾಜ್, ಸಿ. ನರಸಿಂಹಪ್ಪನವರಂಥ ವಿದ್ವಾಂಸರು, ಈ ಪುಸ್ತಕದ ಮುನ್ನುಡಿಕಾರ ಎನ್.ಎಸ್. ಶಂಕರ್ ಹಾಗೂ ಇನ್ನೂ ಅನೇಕರು ತಂತಮ್ಮ ವಲಯಗಳಿಂದ ಅರಸು ವ್ಯಕ್ತಿತ್ವವನ್ನು ನೋಡುತ್ತಿರುವಂತೆ ಅರಸು ಅವರ ಬಗೆಬಗೆಯ ವ್ಯಕ್ತಿತ್ವಗಳು ನಮ್ಮೆದುರು ಮೂಡತೊಡಗುತ್ತವೆ:

ರೈತರ, ಸಾಮಾನ್ಯರ, ಹಳ್ಳಿಗಳ ನಾಡಿಮಿಡಿತ ಬಲ್ಲ ಜನನಾಯಕ; ಶಾಸಕನಾಗಿದ್ದಾಗಲೂ ಹೊಲದಲ್ಲಿ ಉಳಬಲ್ಲ ರೈತ; ರೈತರ ಮನೆಯ ಕಣಜ ಇಲ್ಲವಾದರೆ ಅವರ ಬದುಕೇ ನಾಶವಾಗುತ್ತದೆಂದು ಶೋಕಿಸುವ ಭಾವುಕ; ಅಧ್ಯಯನಶೀಲ ಬುದ್ಧಿಜೀವಿ; ಕಾಡಿನ ಬಗ್ಗೆ ಸಹಜ ಕಾಳಜಿಯಿದ್ದ ಪರಿಸರ ಪ್ರೇಮಿ; ದಾರಿಯಲ್ಲಿ ಸಿಕ್ಕ ನಿರ್ಗತಿಕರ ಕಷ್ಟಕ್ಕೆ ಕೈಲಾದ ಪರಿಹಾರ ನೀಡಬಲ್ಲ ಹೃದಯವಂತ; ಪಿಂಚಣಿ ಕೇಳಲು ಬಂದ ಅಂಗವಿಕಲ ಹುಡುಗಿಯೊಬ್ಬಳಿಗೆ 'ಎರಡೆಕರೆ ಜಮೀನು ಕೊಟ್ಟರೆ ಯಾರಾದರೂ ಮದುವೆಯಾಗಲು ಮುಂದೆ ಬರುತ್ತಾರಲ್ಲವೆ?' ಎಂದು ಯೋಚಿಸಬಲ್ಲ ಪ್ರಾಕ್ಟಿಕಲ್ ಮನುಷ್ಯ; 'ಜೇನು ಕೀಳುವಾಗ ಕೈಗಂಟುವ ಜೇನನ್ನು ನೆಕ್ಕುವುದು ನನಗಲ್ಲ; ನಮ್ಮ ಪಕ್ಷಕ್ಕಾಗಿ' ಎಂದು ಭ್ರಷ್ಟಾಚಾರ ಕುರಿತ ಕಿಲಾಡಿ ತರ್ಕವನ್ನು ಮಂಡಿಸಬಲ್ಲ ಚತುರ ರಾಜಕಾರಣಿ; ಸಾಮಾಜಿಕ ನ್ಯಾಯ ಹಾಗೂ ರಾಜಕೀಯದ ಪಟ್ಟುಗಳೆರಡನ್ನೂ ಬೆಸೆದ ಚಾಣಾಕ್ಷ ಪೈಲ್ವಾನ್; ತಾನೇ ಫಿಯೆಟ್ ಕಾರ್ ಡ್ರೈವ್ ಮಾಡಿಕೊಂಡು ವಿಧಾನಸೌಧ ತಲುಪಬಲ್ಲ ಸರಳ ಮುಖ್ಯಮಂತ್ರಿ; ಒಳ್ಳೆಯ ಪುಸ್ತಕಗಳಂತೆ ಸೊಪ್ಪಿನ ಸಾರು, ಮುದ್ದೆಯನ್ನೂ, ನಾಟಿ ಕೋಳಿಯನ್ನೂ, ಮದ್ಯವನ್ನೂ ಆನಂದಿಸುತ್ತಿದ್ದ ಜೀವನಪ್ರೀತಿಯ ರಸಿಕ; ಅದೇ ರೀತಿ ಹಾದಿಬದಿಯಲ್ಲಿ ಜನ ಕೊಟ್ಟ ರೊಟ್ಟಿ–ಖಾರಾ ಬ್ಯಾಳಿಯನ್ನು ಆರಾಮಾಗಿ ತಿನ್ನಬಲ್ಲ ಸಂತೃಪ್ತ; ತನ್ನ ಶಕ್ತಿಯ ಬಗ್ಗೆ ವಿಶ್ವಾಸವುಳ್ಳ ಹಾಗೂ